ಕಥೆ ಜೊತೆ ಮನುಷ್ಯ ಇರ್ತಾನೋ ಇಲ್ಲವೋ ಗೊತ್ತಿಲ್ಲ, ಆದರೆ ಪ್ರತಿ ಮನುಷ್ಯಗ ಒಂದೊಂದು ಕಥೆ ಇರುತ್ತೈತೆ. ನೀನು ಅಂಥಾ ಕಥೆ ಹುಡಿಕೆಂಡು ಬರಿ ಒಳ್ಳೇದಾಗುತ್ತೆ. ಇವೆಲ್ಲಾ ಬ್ಯಾಡ' ಎಂದು ಹೇಳಿ ಕಳಿಸಿದಳು.

ಪುಲಿಗೆ ಮನ್ಯಾಗೂ, ಶಾಲೇಲೂ ಅದೇ ಗುಂಗು. ಪಾಠ ತಲೆಗೆ ತೂರತ್ತಿರಲಿಲ್ಲ. ಅಜ್ಜಿ ಹೇಳಿದ ಮಾತುಗಳು ಮತ್ತೆ ಮತ್ತೆ ನೆನಪಾಗ್ತಾನೇ ಇದ್ದವು. 'ಹೌದು ಯಾರೋ ಹೇಳಿದ ಕತೆಯನ್ನು ನೀನು ಹೇಳುವುದಲ್ಲ. ನೀನೇ ಹೊಸ ಕಥೆಯನ್ನು ಹುಡುಕಿಕೊಂಡು ಹೋಗು, ಅದು ಸಿಕ್ಕೇ ಸಿಗುತ್ತೆ ನಿನಗೆ ಒಳ್ಳೇದಾಗಲಿ' ಎಂದು ಮಂಜುನಾಥ ಸರ್ ಕೂಡ ಸಲಹೆ ನೀಡಿದರು.

ಜೆರಾಕ್ಸ್ ಅಂಗಡಿ ಜಂಬಣ್ಣನಿಗೆ ಪುಲಿ ವಿಷಯ ಮುಟ್ಟಿಸಿದ. 'ನೋಡಲೇ ಪುಲಿ. ಇದು ನಮ್ಮ ಊರಿನ ಮರ್ಯಾದೆ ಪ್ರಶ್ನೆ. ನೀನು ಎಂತ ಕಥೆ ಬರ್ತೀಯ ಬರಿ. ನಾನು ವೇಸ್ಟ್ ಜೆರಾಕ್ಸ್ ಪೇಪರ್ ಸೇವೆ ಮಾಡ್ತೀನಿ. ಸಿನಿಮಾ ಡೈರೆಟರ್ ನನಗೆ ಬಾಳಾ ಕ್ಲೋಸ್ ಅದಾರ. ನೀನು ಬರೆದು ಬರಿ, ಮುಂದಿನದು ನಾನು ನೋಡಿಕೆಂತಿನಿ' ಎಂದು ಹುರಿದುಂಬಿಸಿ ಕಳಿಸಿದ.

'ಆ ಕತೇಲಿ ಜನರ ಜೀವನ ಕಾಣಿಸಬೇಕು. ಆ ಕಥೆ ಕೇಳಿದವರು ಶಭಾಶ್ ಹುಡುಗ ಅನ್ನಬೇಕು' ಎಂದು ಮೇಷ್ಟ್ರು ಹೇಳಿದ ಮಾತುಗಳನ್ನು ಮಲ್ಲಿ ಮರೆಯದೆ ತಲೇಲಿ ತುಂಬಿಕೊಂಡು ಜನ ಸೇರೋ ಜಾಗಗಳನ್ನು ಹುಡುಕಿಕೊಂಡು ಹೊಂಟ. ಊರಿನ ಕಟ್ಟೆ, ಜಾತ್ರೆ, ಶಿವಪ್ಪ ತಾತನ ಆರಾಧನೆ, ಹುಸೇನ ಪೀರನ ಉರುಸು, ಗದ್ಯಾಗ ನೆಲ್ಲು ಸಸಿ ಹಚ್ಚೋ ಹೆಣಮಕ್ಕಳ ಹತ್ತಿರ, ಹೀಗೆ ಪುಲಿ ಮಲ್ಲಿಯು ಕಥೆಯ ಜಾಡು ಹಿಡಿದು ನಡಿಯುತ್ತಲೇ ಊರಿನ ದೊಡ್ಡತಲೆ ಎನ್ನಿಸಿದ ಪುಟ್ಲೂರು ಓಬಳೇಶನ ಮನೆ ಬಳಿ ಬಂದ. ಇಡೀ ಊರಿಗೆ ಅನ್ನದಾತ ಆಗಿದ್ದ ಅವರನ್ನು ನೋಡಾಕ, ಮಾತಾಡಸಾಕ ಜನ ಜಾತ್ರಿ ಬಂದಂಗ ಬರುತ್ತಿದ್ದರು. 'ಬರಗಾಲದ ಬ್ಯಾಸಿಗಿನಾಗೂ ಸಾವ್ಕಾರ ಹಳ್ಳದಾಗ ಬಂಡಿ ಎತ್ತುಗಳಿಗೆ ಕೆಲಸ ಕೊಡ್ತಾನ, ಇಂಥೋರು ಎಲ್ಲಿ ಸಿಗ್ತಾರೆ ಹೇಳು' – ಜನ ಹೀಗೆ ಮಾತನಾಡೋದನ್ನು ಕೇಳಿ ಪುಲಿಗೆ ಖುಷಿಯಾಯಿತು. ನನ್ನ ಕಥೆನಲ್ಲಿ ಇಂಥೋರಿಗೆ ಒಳ್ಳೇ ಪಾರ್ಟ್ ಕೊಡೋಣ ಅಂಥ ಗುರುತು ಮಾಡಿಕೊಂಡ.

ಸುತ್ತ ಹತ್ತಾರು ಊರು ತಿರುಗಿ ಬಂದಮೇಲೆ, ಹಂಪಿ ಹುಣ್ಣಿಮೆ ದಿವಸ ಊರಿನ ಉಚ್ಚಾಯದಲ್ಲಿ ಬೇಕಿದ್ದ ಬೆಸ್ಟ್ ಕಥೆ ಸಿಗೋದು ಗ್ಯಾರಂಟಿ ಅನಕಂಡು ಪುಲಿ ಪೇಪರ್ ಪ್ಯಾಡು ಪೆನ್ನು ತಗೊಂಡು ರೆಡಿಯಾದ. ಅವನ ಆಸೆ ಈ ಸಲ ಫಲಿಸಿತು ಅನ್ನೋ ಹಂಗೆ ದೇಶದ ಬೇರೆ ಬೇರೆ ಕಡೆಯಿಂದ ಬಂದ ಜನರಿಂದ ಪುಲಿ ಪೇಪರ್ ಖಾಲಿಯಾಗೋಷ್ಟು ಬರಕಂಡ. ಅವೊತ್ತು ಪುಲಿಗೆ ನಿದ್ದೆ ತಣ್ಣಗ ಬಂತು.

ಮರುದಿನ ಶಾಲೆಯಲ್ಲಿ ಮೇಷ್ಟ್ರು, 'ಕಥೆ ಬರೆದೆಯಾ ಪುಲಿ?' ಎಂದರು. ಪುಲಿ, ನಡೆದುದನ್ನು ಹೇಳಿ 'ಸುದ್ದಿಗಳೇನೋ ಪೆಂಡೆ ಪೆಂಡೆ ಅದ್ಯಾವ, ಆದರೆ

